**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯದಲ್ಲಿ,**
**ನ.ರಾ.ಪುರ.**
**ಸಿ.ಸಿ. ನಂ ಃ106/2025**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಸ್ವೀಕಾರ್ | ಸಿ.ಡಬ್ಲ್ಯೂ - 07 |
| ತಂದೆಯ ಹೆಸರು | ಃ ಉಮೇಶ್ ಸಿ ಆರ್ | ಪಿ.ಡಬ್ಲ್ಯೂ - 07 |
| ವಯಸ್ಸು | ಃ 27 ವರ್ಷ | |
| ಉದ್ಯೋಗ | ಃ ವ್ಯವಸಾಯ | |
| ವಾಸಸ್ಥಳ | ಃ ಚಿಕ್ಕಗ್ರಹಾರ | |

ದಿನಾಂಕಃ **03/03/2026** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃಃ

ಚಾಸಾ 1 ರಿಂದ 6, 8 ರಿಂದ 10 ರವರು ಪರಿಚಯ ಇರುತ್ತಾರೆ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ನನಗೆ ಘಟನೆಯ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೋಪಿತರನ್ನು ನಾನು ನೋಡಿರುವುದಿಲ್ಲ.

(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ಹಾಗೂ ನನ್ನಚಿಕ್ಕಪ್ಪ ಚಾಸಾ 1 ರವರ ಜಮೀನಿನ ಸಣ್ಣ-ಪುಟ್ಟ ಕೆಲಸಗಳನ್ನು ನೋಡಿಕೊಳ್ಳುತ್ತಿದ್ದು, ದಿಃ 05/08/2025 ರಂದು ನನ್ನ ಚಿಕ್ಕಪ್ಪ ಊರಿಗೆ ಬಂದು ತೋಟಕ್ಕೆ ಗೊಬ್ಬರ ಹಾಕಿ ಆ ದಿನ ಅಲ್ಲೇ ಉಳಿದುಕೊಂಡಿದ್ದು ಪುನಃ ಶೃಂಗೇರಿಗೆ ಕೆಲಸಕ್ಕೆ ಹೋಗಿದ್ದು, ದಿಃ 15/08/2025 ರಂದು ನಮ್ಮ ಊರಾದ ಚಿಕ್ಕಗ್ರಹಾರದ ಮನೆಗೆ ಬಂದಿದ್ದು, ಆಗ ಅವರು ಮನೆಯನ್ನು ನೋಡಲಾಗಿ ಸದರಿ ಮನೆಯ ಬೀಗವನ್ನು ಒಡೆಯಲಾಗಿದ್ದು, ಅವರು ಒಳಗೆ ಹೋಗಿ ನೋಡಿದಾಗ ಯಾರೋ ಕಳ್ಳತನ ಮಾಡಿರುವುದಾಗಿ ನಮಗೆ ತಿಳಿಸಿದ್ದು, ನಂತರ ದಿಃ 16/08/2025 ರಂದು ಅವರು ದೂರನ್ನು ನೀಡಿದ್ದು, ದಿಃ 18/08/2025 ರಂದು ಈ ಪ್ರಕರಣದ ಆರೋಪಿಗಳು ಪತ್ತೆಯಾಗಿದ್ದು ಆಗ ನಾನು ಮತ್ತು ಚಾಸಾ 1 ರವರು ಹೋಗಿನೋಡಲಾಗಿ ಅವರು ನಮ್ಮೂರಿನವರೇ ಆಗಿದ್ದರು ಎಂದರೆ ಸರಿಯಲ್ಲ. ಸದರಿ ಆರೋಪಿತರು ನಮ್ಮ ಚಿಕ್ಕಪ್ಪನ ಮನೆಯಲ್ಲಿ ಇಂಡಿಯನ್ ಗ್ಯಾಸ್ ಸಿಲಿಂಡರ್, ಸುಕುಮ್ ಪವರ್ ಸಿಸ್ಟಂ ನ ಸೋಲಾರ್ ಪ್ಯಾನೆಲ್, ಒಂದು ಬ್ಯಾಟರಿ ಹಾಗೂ ಎರಡು ಒಲೆ ಇರುವ ಗ್ಯಾಸ್ ಸ್ಟವ್ ಮತ್ತು ಕರೆಂಟ್ ಇಸ್ತ್ರಿ

ಪೆಟ್ಟಿಗೆಯನ್ನು ಕಳ್ಳತನ ಮಾಡಿದ್ದರು ಎಂದರೆ ಸರಿಯಲ್ಲ. ಅದರಲ್ಲಿ ಭಾನುಪ್ರಕಾಶ್ ಇವರಿಗೆ ಇಂಡಿಯನ್ ಗ್ಯಾಸ್ ಸಿಲಿಂಡರ್, ಸೋಲಾರ್ ಪ್ಯಾನೆಲ್, ಬ್ಯಾಟರಿಯನ್ನು ಮಾರಾಟ ಮಾಡಿರುವುದಾಗಿ ಮತ್ತು ಎರಡು ಒಲೆ ಇರುವ ಗ್ಯಾಸ್ ಸ್ಟವ್ ಹಾಗೂ ಕರೆಂಟ್ ಇಸ್ತ್ರಿ ಪೆಟ್ಟಿಗೆಯನ್ನು ಗಡಿಗೇಶ್ವರ ವಾಸಿ ಮಹೇಶ್ ರವರಿಗೆ ಹಣಕ್ಕೆ ಮಾರಾಟ ಮಾಡಿರುತ್ತಾರೆ ಎಂದು ವಿಚಾರ ತಿಳಿಯ್ತು ಎಂದರೆ ಸರಿಯಲ್ಲ. ಸದರಿ ವಸ್ತುಗಳ ಮೌಲ್ಯ ರೂ.10 ಸಾವಿರ ಆಗಿರುತ್ತದೆ ಎಂದರೆ ಸರಿಯಲ್ಲ. ಆ ಸಂಬಂಧ ಈಗ ಓದಿ ಹೇಳಿದ ನಿಪಿ 22 ರಂತೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಪಿ 22 ರಂತೆ ಹೇಳಿಕೆ ಕೊಟ್ಟಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು॥ ಆರೋಪಿ ಪರ

ಆರೋಪಿ ಪರ ವಕೀಲರು ಪಾಟಿ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ॥ ಇಲ್ಲ ॥

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು॥ ನ.ರಾ.ಪುರ.

ಸಾಕ್ಷಿದಾರರ ಸಹಿ॥